

# ಅನಾಥಪ್ರಜ್ಞೆ

# ಅವಳಿ ಜೀವಸೆಲೆ

➤ ನಾಡೋಜ ಡಾ. ಬಿ.ಟಿ. ರುದ್ರೇಶ್
ಹೋಮಿಯೋಪತಿ ವೈದ್ಯರು, ಲೇಖಕರು

ಹೆಣ್ಣು ಪ್ರೀತಿಯ ಕಡಲು. ಗಂಡೆಂಬ ಜೀವವನ್ನು ಕಾಪಿಡುವ ದಿವ್ಯಪ್ರಭೆ. ಕುಟುಂಬದ ಪ್ರಮುಖ ಭಾಗ ಹೆಣ್ಣೇ. ಅವಳ ಅಂತರಂಗದ ಪಿಸುದನಿಗೆ ದಶದಿಕ್ಕುಗಳಲ್ಲೂ ಅನುರಣಿಸುವ ಶಕ್ತಿ ಇದೆ. ಆದರೆ ಸಮಾಜ ಹೆಣ್ಣನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬೇಕು. ತನ್ನ ಇರಾದೆಯಂತೆಯೇ ನಡೆದುಕೊಳ್ಳಬೇಕು. ತನ್ನ ಹಿಡಿತದಲ್ಲೇ ಇರಬೇಕು ಎಂಬ ದಾರ್ಷ್ಟ್ಯದಿಂದ ವರ್ತಿಸುತ್ತಾ ಬಂದಿದೆ. ವಿವಿಧ ರೀತಿಯಲ್ಲಿ ಮಹಿಳಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿದೆ. ತಾರತಮ್ಯದ ನಿರ್ಲಕ್ಷ್ಯ ಧೋರಣೆಯನ್ನು ತಾಳಿದೆ. ಇದರಿಂದ ಬಹಳಷ್ಟು ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಮಹಿಳೆಯರು ಪುರುಷರಿಗೆ ಸಮಾನರು ಎನ್ನುವ ಮನೋಭಾವ ಎಲ್ಲರಲ್ಲೂ ಮೂಡಬೇಕು. ಪುರುಷಪ್ರಧಾನ ಸಮಾಜ ಸ್ತ್ರೀಸಮಾನತೆಯ ಬಗ್ಗೆ ಎಷ್ಟೇ ಮಾತನಾಡಿದರೂ ಕಾನೂನು ಕಾಯ್ದೆಗಳನ್ನು ತಂದರೂ ಪುರುಷರ ಬಿಗಿಮುಷ್ಟಿಯಿಂದ ಬಿಡಿಸಿಕೊಳ್ಳಲಾಗಿಲ್ಲ. ಪರಿಸ್ಥಿತಿ ಪೂರ್ಣವಾಗಿ ಬದಲಾಗಿಲ್ಲ.

ನನ್ನ ಮಗ ಡಾ. ಮನು ಜಯನಗರ ನಾಲ್ಕನೆಯ "ಟಿ" ಬ್ಲಾಕ್‌ನಲ್ಲಿ ಅಶ್ವಿನಿ ಹೋಮಿಯೋ ಕ್ಲಿನಿಕ್‌ನ ಹೊಸ ಶಾಖೆಯನ್ನು ಆರಂಭಿಸಿದ್ದಾನೆ. ಅವನ ಆತ್ಮವಿಶ್ವಾಸದ ಬಲವರ್ಧನೆಗಾಗಿ ನಾನು ಪ್ರತಿ ಶುಕ್ರವಾರ ಸಂಜೆ ಭೇಟಿ ನೀಡಿ ಅವಲೋಕಿಸುತ್ತೇನೆ. ವೈದ್ಯಕೀಯ ವೃತ್ತಿಯ ವಿವಿಧ ಮಜಲುಗಳನ್ನು ಪರಿಚಯಿಸುತ್ತ ಚಿಕಿತ್ಸೆಗೆ ಅಗತ್ಯ ಸಲಹೆ ಸೂಚನೆಗಳನ್ನು ಕೊಡುತ್ತಾ ಬಂದಿದ್ದೇನೆ. ಇತ್ತೀಚೆಗೆ ಮನು ಒಂದು ಪ್ರಕರಣವನ್ನು ನನ್ನ ಮುಂದಿಟ್ಟ. "36 ವರ್ಷದ ಮಹಿಳೆಯರಿಬ್ಬರು ಬಂದಿದ್ದರು. ಅವರಿಬ್ಬರೂ ತದ್ರೂಪ ಅವಳಿಗಳು. ಅವರ ರೂಪ, ವ್ಯಕ್ತಿತ್ವ, ಕಾಯಿಲೆ, ನಡವಳಿಕೆಯಲ್ಲೂ ಬಹಳಷ್ಟು ಸಾಮ್ಯತೆ ಇದೆ. ಅವರಿಗೆ ವಿಪರೀತ ಅಲರ್ಜಿ. ನೀರಿನ ಹೊರತಾಗಿ ಏನು ಸೇವಿಸಿದರೂ ತತ್ ಕ್ಷಣ ಪಿತ್ತಗಂದೆಗಳು ಕಾಣಿಸಿಕೊಳ್ಳುತ್ತವೆ. ಊಟ ಸೇರುವುದಿಲ್ಲ. ವಾಂತಿ ಆಗುತ್ತದೆ. ವಿಪರೀತ ಚಡಪಡಿಕೆ. ಈಗಾಗಲೇ ಎರಡು ವರ್ಷದಿಂದ ಐದಾರು ಕೆ.ಜಿ. ತೂಕ

ಕಳೆದುಕೊಂಡಿದ್ದೇವೆ. ಹೇಗೊ ಒಂದಿಷ್ಟು ಅನ್ನ – ತಿಳಿಸಾರು ತಿಂದು ಬದುಕುತ್ತಿದ್ದೇವೆ" ಅಂತ ಹೇಳಿದರು. ಆದರೆ ಅವರು ಚಿಕಿತ್ಸೆಗಾಗಿ ಬಂದಿರಲಿಲ್ಲ! "ನಮಗೀಗಲೇ ಬಹಳಷ್ಟು ಚಿಕಿತ್ಸೆಗಳಾಗಿವೆ. ಹೋಮಿಯೋಪತಿಯೂ ಸೇರಿದಂತೆ ಎಲ್ಲ ಬಗೆಯ ಚಿಕಿತ್ಸೆಯನ್ನು ನೋಡಿದ್ದಾಗಿದೆ" ಎಂದು ಲಭ್ಯವಿರುವ ಔಷಧಿಗಳ ಹೆಸರುಗಳನ್ನು ಹೇಳಿದರು. ಮತ್ತೆ ಅವರು "ನೀವು ಇಂಥ ಕೇಸ್ ನೋಡಿದ್ದೀರಾ? ನಿಮ್ಮ ಚಿಕಿತ್ಸೆಯಿಂದ ನಿಜವಾಗಿ ಗುಣ ಆಗುತ್ತಾ? ಯಾವುದೇ ಔಷಧ ತೆಗೆದುಕೊಂಡರೂ ನಮಗೆ ಅಡ್ಡ ಪರಿಣಾಮ ಆಗುತ್ತೆ" ಹೀಗೆ ಹಲವಾರು ಸಂದೇಹಗಳನ್ನು ವ್ಯಕ್ತಪಡಿಸಿದರು. ಅದಕ್ಕೆ ನಾನು ಶುಕ್ರವಾರ ಸಂಜೆ ಮತ್ತೆ ಬರಲು ಹೇಳಿರುವುದಾಗಿ ನನ್ನ ಮುಂದೆ ಈ ಪ್ರಕರಣವನ್ನು ಇಟ್ಟ.

ಆ ಸಹೋದರಿಯರು ನನ್ನ ಮುಂದೆ ಬಂದು ಕುಳಿತರು. ಹಲವಾರು ಪ್ರಶ್ನೆಗಳ ಸುರಿಮಳೆಗೈದರು. ಅದರಲ್ಲಿ ಅವರು ಅನುಭವಿಸಿರುವ ಯಾತನೆ, ನೋಡಿರುವ ವೈದ್ಯರ ವಿವರ, ಪಡೆದಿರುವ ಚಿಕಿತ್ಸೆ, ಔಷಧೋಪಚಾರ, ಮಾಡಿರುವ ವೆಚ್ಚ ಎಲ್ಲವೂ ಇತ್ತು. ಯಾವುದೇ ಔಷಧಿಯೂ ನಾಟದಿರುವ ಪರಿಸ್ಥಿತಿ ಅವರದಾಗಿತ್ತು. "ನೀವು ಗುಣಪಡಿಸುವುದು ಖಚಿತ ಎಂದಾದರೆ ಚಿಕಿತ್ಸೆ ತೆಗೆದುಕೊಳ್ಳುತ್ತೇವೆ. ಆರ್ಥಿಕ ಸಮಸ್ಯೆಯೂ ಇದೆ" ಎಂದರು. ಯಾವುದೇ ಒಬ್ಬ ವೈದ್ಯ ನಾನು ಇಂತಹ ಕಾಯಿಲೆಯನ್ನು ಖಚಿತವಾಗಿ ಗುಣಪಡಿಸುತ್ತೇನೆ. ಇಂತಿಷ್ಟೇ ದಿನಗಳಲ್ಲಿ ಗುಣಪಡಿಸುತ್ತೇನೆಂದು ಹೇಳಿದಲ್ಲಿ ಅವನು ನಿಮ್ಮನ್ನು ಮೂರ್ಖರನ್ನಾಗಿಸುತ್ತಿದ್ದಾನೆ. ಇಲ್ಲವೇ ಅವನೇ ಮೂರ್ಖನಾಗಿದ್ದಾನೆ ಎನ್ನುವ ನನ್ನ ನಿಲುವನ್ನು ಅವರ ಮುಂದಿಟ್ಟೆ, ಆ ಯುವತಿಯರು ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡು ನನ್ನತ್ತ ತಿರುಗಿದರು. ನಿಮ್ಮ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುವುದು ವೈದ್ಯನ ಧರ್ಮವಾದರೂ ಹಲವಾರು ರೋಗಿಗಳು ಹೊರಗೆ ಕಾಯುತ್ತಿದ್ದಾರೆ. ಸಮಯಾಭಾವದಿಂದ ಈಗ ಸಾಧ್ಯವಾಗುತ್ತಿಲ್ಲ. ನನ್ನ ಬಳಿ ಚಿನ್ನದ ಕೀಲಿ ಕೈ ಇದೆ ಎಂದು ಎಲ್ಲರ ಮನೆಬಾಗಿಲು ತೆರೆಯಲಾಗುವುದಿಲ್ಲ. ನೀವು ನಿಶ್ಚಯಿಸಿಕೊಂಡು ಅನಂತರ ಹೇಳಿ. ನೀವಿನ್ನು ಹೊರಡಬಹುದು ಎಂದೆ. ಮಗ ಮನು ಓಡಿ ಬಂದು ಏನಾಯ್ತಪ್ಪ? ಅಂದ. ಇವರೇನು ಮತ್ತೆ ಬರುವಂತೆ ಕಾಣುವುದಿಲ್ಲ. ಮುಂದಿನವರನ್ನು ಕರಿ ಅಂದೆ. ಎಂದಿನಂತೆ ತಡರಾತ್ರಿವರೆಗೂ ಚಿಕಿತ್ಸೆ ಕೊಟ್ಟು ಮನೆಗೆ ಬಂದೆ. ಈ ಘಟನೆ ನನ್ನ ಸ್ಮೃತಿಪಟಲದಿಂದ ಮಾಯವಾಯಿತು.

ಮಾರನೆಯ ದಿನ ಗಾಂಧೀ ಬಜಾರ್‌ನ ನಮ್ಮ ಕ್ಲಿನಿಕ್‌ನಲ್ಲಿ ಕಿಕ್ಕಿರಿದ ರೋಗಿಗಳು. 50–60 ರೋಗಿಗಳನ್ನು ನೋಡಿದ ನಂತರ ಈ ಸಹೋದರಿಯರು ಧುತ್ತೆಂದು ನನ್ನ ಮುಂದೆ ಬಂದು ಕುಳಿತಾಗ ನನಗೆ ಆಶ್ಚರ್ಯವಾಯಿತು. ಹಿಂದಿನ ದಿನದ ಘಟನೆಗಳು ಸ್ಮೃತಿಪಟಲದ ಮೇಲೆ ತೇಲಿ ಬಂದವು. ಇವರು ಬೆಳಿಗ್ಗೆಯೇ ಬಂದು ನನ್ನ ಮಗನಿಂದಲೇ ಕೇಸ್‌ಹಿಸ್ಟರಿ ಬರೆಸಿ ನಾಲ್ಕೈದು ತಾಸು ಕಾದಿದ್ದು ಒಳಗೆ ಪ್ರವೇಶ ಪಡೆದಿದ್ದರು. ಬಹುಪಾಲು ಖಡಕ್ ಆಗಿದ್ದ ಈ ಸಹೋದರಿಯರ ಮುಖಚರ್ಯೆ ಬದಲಾಗಿತ್ತು. ಹಿಂದಿನ ದಿನ ನಾನಾಡಿದ್ದ ಮಾತುಗಳು ಮನಸ್ಸಿಗೆ ನಾಟಿದಂತೆ ಕಂಡುಬಂತು. ಕೇಸ್ ಹಿಸ್ಟರಿಯ ಮೇಲೆ ಕಣ್ಣಾಡಿಸಿದೆ. ಪರಿಸ್ಥಿತಿಯನ್ನು ಅವಲೋಕಿಸಿದಾಗ ಅವರ ವರ್ತನೆಯಾಗಲಿ, ನಡೆದುಕೊಂಡದ್ದಾಗಲಿ ತಪ್ಪೆಂದು ಅನ್ನಿಸಲಿಲ್ಲ. ಅವರೊಂದಿಗೆ ಸಂವಾದಕ್ಕಿಳಿದಾಗ ಒಂದೊಂದಾಗಿ ಬದುಕಿನ ಪುಟಗಳ ಚರಿತೆಯನ್ನು ತೆರೆದಿಡುತ್ತಾ ಹೋದರು.

ಇವರು ಅವಳಿ ಸಹೋದರಿಯರು. ಮೂರನೆಯ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡಿದ್ದರು. ತಂದೆಯು ಪತ್ನಿ ಬದುಕಿದ್ದಾಗಲೇ ನಾದಿನಿಯನ್ನು ಮದುವೆಯಾಗಿದ್ದ. ಆತನ ಲಂಪಟತನಕ್ಕೆ ಬೇಸತ್ತು ತಾಯಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಬಡತನದ ಬೇಗೆಯಿಂದ ಇವರ ಅಜ್ಜಿ ಚಿಕ್ಕಮ್ಮನನ್ನು ಇವರಪ್ಪನಿಗೇ ಮದುವೆ ಮಾಡಿಕೊಟ್ಟಿದ್ದರು. ಆಕೆ ಈ ಮಕ್ಕಳನ್ನು ಒಟ್ಟಿಗೆ ಇರಿಸಿಕೊಳ್ಳಲು ನಿರಾಕರಿಸಿ ಹಿಂಸಿಸತೊಡಗಿದಳು. ಆಗ ಅಜ್ಜಿಯು ಎರಡು ಹೆಣ್ಣುಮಕ್ಕಳನ್ನು "ತಂದೆ, ತಾಯಿ ಯಾರೂ ಇಲ್ಲ" ಎಂದು ಬರೆದು ಕೊಟ್ಟು ಅನಾಥಾಶ್ರಮಕ್ಕೆ ಸೇರಿಸಿ, ಸಂಪೂರ್ಣ ವಾರಸುದಾರಿಕೆಯನ್ನು ಅನಾಥಾಶ್ರಮಕ್ಕೇ ವಹಿಸಿದರು. ಈ ಅವಳಿಗಳು ಓದಿನಲ್ಲಿ ಚುರುಕಾಗಿದ್ದರು. ವಿಧೇಯ ವ್ಯಕ್ತಿತ್ವ, ಸದಾ ಚಟುವಟಿಕೆಯ ಕ್ರಿಯಾಶೀಲತೆಯಿಂದಾಗಿ ಆಶ್ರಮದ ಗುರುಗಳು ಹಾಗೂ ಸಿಬ್ಬಂದಿಗಳಿಗೆ ಪ್ರೀತಿಪಾತ್ರರಾದರು. ಎಸ್.ಎಸ್.ಎಲ್.ಸಿ. ಮತ್ತು ಪಿಯೂಸಿ ಪರೀಕ್ಷೆಗಳಲ್ಲಿ ಐದು ಮತ್ತು ಆರನೆಯ ರ್‍ಯಾಂಕ್ ಗಳಿಸಿದರು.

ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜ್ ಸೇರಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾದರು. ಜೊತೆಯಲ್ಲಿ ಹವ್ಯಾಸವಾಗಿ ರೂಢಿಸಿಕೊಂಡಿದ್ದ ಭರತನಾಟ್ಯದಲ್ಲಿ ವಿದ್ವತ್ತನ್ನು ಪಡೆದಿದ್ದರು. ಹಲವಾರು ಸ್ಪರ್ಧೆಗಳಲ್ಲಿ ವಿಜೇತರಾಗಿದ್ದುದಲ್ಲದೆ ವಿವಿಧ ವೇದಿಕೆಗಳಲ್ಲಿ ಕಾರ್ಯಕ್ರಮಗಳನ್ನು ಕೊಟ್ಟಿದ್ದರು. ಐ.ಟಿ. ಕಂಪನಿಯೊಂದರಲ್ಲಿ ಉದ್ಯೋಗವನ್ನೂ ಗಳಿಸಿದ್ದರು. ಈ ಬೆಳವಣಿಗೆಯನ್ನು ದೂರದಿಂದ ಪರೋಕ್ಷವಾಗಿ ಗಮನಿಸುತ್ತಿದ್ದ ತಂದೆಯು ಒಂದು ದಿನ ಇದ್ದಕ್ಕಿದ್ದಂತೆ ಅನಾಥಾಲಯಕ್ಕೆ ಭೇಟಿಕೊಟ್ಟು ಆಡಳಿತವರ್ಗಕ್ಕೆ "ಇವರಿಬ್ಬರೂ ನನ್ನ ಮಕ್ಕಳು. ಕಾರಣಾಂತರದಿಂದ ಇವರನ್ನು ನೋಡಿಕೊಳ್ಳಲಾಗಲಿಲ್ಲ. ಮನೆಗೆ ಕರೆದುಕೊಂಡು

ಹೋಗುತ್ತೇನೆ" ಎಂದು ಮನವರಿಕೆ ಮಾಡಿಕೊಟ್ಟ. ಆದರೂ ಅನಾಥಾಲಯದ ನಿಯಮಾವಳಿ ಪ್ರಕಾರ "ಮಕ್ಕಳಿಗೆ ಇಪ್ಪತ್ತೊಂದು ವರ್ಷ ಆಗುವ ತನಕ ಯಾರ ಸುಪರ್ದಿಗೂ ವಹಿಸುವಂತಿಲ್ಲ" ಎಂದು ಆಡಳಿತ ಮಂಡಳಿ ಆತನ ಬೇಡಿಕೆಯನ್ನು ನಿರಾಕರಿಸಿತು. ಈ ತರುಣಿಯರಿಗೆ ಇಪ್ಪತ್ತೊಂದು ವರ್ಷ ಆಗುವುದನ್ನೇ ಕಾದಿದ್ದ ತಂದೆ ಬಂದು ಮನೆಗೆ ಕರೆದುಕೊಂಡು ಹೋದ. ಆ ವೇಳೆಗೆ ಆತ ಶ್ರೀಮಂತಿಕೆ, ಸಮಾಜದಲ್ಲಿ ಪ್ರತಿಷ್ಠೆ, ಅಂತಸ್ತನ್ನು ಗಳಿಸಿದ್ದ. ತನ್ನ ಆದ್ಯ ಕರ್ತವ್ಯ ಎಂಬಂತೆ ಎರಡು–ಮೂರು ತಿಂಗಳಲ್ಲೇ ಇಬ್ಬರಿಗೂ ಮದುವೆ ಮಾಡಲು ಮುಂದಾದ. ಇವರ ಒಪ್ಪಿಗೆ ಪಡೆದು ಒಂದೇ ಮನೆಯ ಅಣ್ಣತಮ್ಮರಿಗೆ ಸಹೋದರಿಯರನ್ನು ಕೊಟ್ಟು ಮದುವೆ ಮಾಡಿದ.

ಮದುವೆಯಾದ ಕೆಲವೇ ತಿಂಗಳಲ್ಲಿ ಈ ತಂದೆಯ ಅಸಲಿ ವ್ಯಕ್ತಿತ್ವ ಬಯಲಾಯಿತು. ಪೂರ್ವಾಪರಗಳನ್ನು ಗುಟ್ಟಾಗಿಟ್ಟಿದ್ದು ಬೀಗರ ಮನೆಯವರಿಗೆ ತಿಳಿಯಿತು. ಜತೆಗೆ ಮದುವೆಯ ಸಂದರ್ಭದಲ್ಲಿ ಅಳಿಯಂದರಿಗೆ ತಲಾ ಹತ್ತುಲಕ್ಷ ರೂಪಾಯಿಗಳನ್ನು ಉಡುಗೊರೆಯಾಗಿ ಕೊಡುವುದಾಗಿ ವಾಗ್ದಾನಮಾಡಿ ಕೊಟ್ಟಿರಲಿಲ್ಲ. ಅಲ್ಲಿಯೂ ಈ ಹೆಣ್ಣುಮಕ್ಕಳಿಗೆ ತಂದೆ ದ್ರೋಹವನ್ನೇ ಮಾಡಿದ್ದ. ಅತ್ತೆ – ಮಾವ ಮತ್ತು ಗಂಡಂದಿರ ವಾಗ್ದಾಳಿ, ಹಿಂಸೆ ಸಹಿಸಲಾರದಾಗಿತ್ತು. ಬೆಂಕಿಯಿಂದ ಬಾಣಲೆಗೆ ಬಿದ್ದ ಅನುಭವವಾಯಿತು. ಅನಿವಾರ್ಯ ಎಂಬಂತೆ ಒಪ್ಪಿತ ವಿಚ್ಛೇದನ ಕೊಟ್ಟರು. ತವರುಮನೆಗೆ ಹೋಗೋಣವೆಂದರೆ, ಇವರ ಪಾಲಿಗೆ ತವರ ಬಾಗಿಲು ಶಾಶ್ವತವಾಗಿ ಮುಚ್ಚಿತ್ತು. ಚಿಕ್ಕಮ್ಮ ಇವರನ್ನು ಇಟ್ಟುಕೊಳ್ಳಲು ನಿರಾಕರಿಸಿದಳು. ಬಂದದಾರಿಗೆ ಸುಂಕವಿಲ್ಲ ಎಂಬಂತೆ ಹೊರಟರು. ವಿಧಿ ಇವರನ್ನು ಮತ್ತೆ ಅನಾಥರನ್ನಾಗಿಸಿತು. ಇದನ್ನು ದುರ್ವಿಧಿ ಎನ್ನದೆ ಇನ್ನೇನು ಹೇಳಲು ಸಾಧ್ಯ?

ಎದೆಗುಂದದ ಈ ಸಹೋದರಿಯರು ಮತ್ತೆ ಕೆಲಸವನ್ನು ಅರಸಿ ಹೊರಟರು. ಐ.ಟಿ. ಕಂಪನಿಯೊಂದರಲ್ಲಿ ಕೆಲಸ ಸಿಕ್ಕಿತು. ಚಿಕ್ಕದೊಂದು ಬಾಡಿಗೆ ಮನೆ ಮಾಡಿಕೊಂಡರು. ಜತೆಗೆ ಭರತನಾಟ್ಯದಲ್ಲಿ ಹೆಚ್ಚಿನ ಪರಿಶ್ರಮ ಹಾಕಿ ಔನ್ನತ್ಯಕ್ಕೇರಲು ಆರಂಭಿಸಿದರು. ಭರತನಾಟ್ಯ ಪ್ರದರ್ಶನ ಮತ್ತು ಮಕ್ಕಳಿಗೆ ಭರತನಾಟ್ಯ ಕಲಿಸುವುದರಿಂದ ಜನಪ್ರಿಯರಾದರು. ಈ ಸಹೋದರಿಯರ ಭರತನಾಟ್ಯ ಗುರುಗಳು ಇವರನ್ನು ಟಿ.ವಿ. ವಾಹಿನಿಯಲ್ಲಿ ಕಾರ್ಯಕ್ರಮ ಕೊಡಲು ಪರಿಚಯಿಸಿದರು. ಕುತೂಹಲಕ್ಕಾಗಿ ಭಾಗವಹಿಸಿದ ಸ್ಪರ್ಧೆ ಇವರನ್ನು ಭಾರತದ ಮೊದಲ ಹತ್ತು ಸ್ಪರ್ಧಿಗಳಲ್ಲಿ ಒಬ್ಬರನ್ನಾಗಿಸಿತ್ತು. ಆ ವೇಳೆಗಾಗಲೇ ಈ ಸಹೋದರಿಯರು ಅಮೆರಿಕಾ, ಐರೋಪ್ಯ ರಾಷ್ಟ್ರಗಳು, ಕೊಲ್ಲಿ ರಾಷ್ಟ್ರಗಳಲ್ಲಿ ಪ್ರದರ್ಶನ ನೀಡಿ ಪ್ರಸಿದ್ಧರಾಗಿದ್ದರು.

ದುರದೃಷ್ಟವೆಂದರೆ ಟಿ.ವಿ. ಕಾರ್ಯಕ್ರಮ



ನಿರ್ವಾಹಕರೊಬ್ಬರು ಇವರನ್ನು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಕ್ಕೆ ತರಲು ಕಾಣಿಕೆಯಾಗಿ ಲೈಂಗಿಕವಾಗಿ ಬಳಸಿಕೊಳ್ಳಲು ದುಂಬಾಲು ಬಿದ್ದ. ಇದರಿಂದ ಬೇಸತ್ತ ಯುವತಿಯರು ವಿರೋಧ ವ್ಯಕ್ತಪಡಿಸಿ ಸ್ಪರ್ಧೆಯಿಂದ ಹೊರಗುಳಿದರು. ಇದನ್ನು ಸಹಿಸದ ದೂರದರ್ಶನದ ನಿರ್ಮಾಪಕ ಇವರ ಬಗ್ಗೆ ಸಲ್ಲದ ಆರೋಪಗಳನ್ನು ಹೊರಿಸಿ ಅಪಪ್ರಚಾರ ಮಾಡಿದರು. ಸಮಾಜದ ನಿಂದೆ ಮತ್ತು ಭರ್ತ್ಸನೆಗೆ ನೊಂದು ಇಬ್ಬರೂ ಆತ್ಮಹತ್ಯೆಗೂ ಪ್ರಯತ್ನಿಸಿದ್ದರು. ಇವರ ಪರವಾಗಿ ನಿಂತ ಅಭಿಮಾನಿಗಳು ದೂರದರ್ಶನದವರ ವಿರುದ್ಧ ದೂರು ಕೊಡಲು ಒತ್ತಾಯಿಸಿದರು. ಆದರೆ ಇವರ ಬಗ್ಗೆ ಒಲವು ಮತ್ತು ಆತ್ಮೀಯತೆ ಇದ್ದ ವಕೀಲರೊಬ್ಬರು "ಸೆರಗು ಮುಳ್ಳಿನ ಮೇಲೆ ಬಿದ್ದಿದೆ. ಜೋಪಾನವಾಗಿ ಬಿಡಿಸಿಕೊಳ್ಳಬೇಕು. ಈ ಸಮಾಜ ಹೆಣ್ಣುಮಕ್ಕಳ ಶೀಲದ ಬಗ್ಗೆ ಶಂಕೆ ವ್ಯಕ್ತಪಡಿಸಿ ತುಚ್ಛವಾಗಿ ಕಾಣುತ್ತದೆ" ಎಂದು ಎಚ್ಚರಿಸಿದರು. ಅವರ ಸಲಹೆಯಂತೆ ದೂರು ಕೊಡುವ ಸಾಹಸಕ್ಕೆ ಕೈ ಹಾಕಲಿಲ್ಲ.

ಈ ನಡುವೆ ಇವರ ಬಾಡಿಗೆ ಮನೆಯ ಮಾಲೀಕ ಇವರನ್ನು ಕುಹಕ ದೃಷ್ಟಿಯಿಂದ ನೋಡಲಾರಂಭಿಸಿದ್ದ.

ಇವರ ಬಗ್ಗೆ ಅವನಿಗೆ ಶಂಕೆ. ತಂದೆ–ತಾಯಿ ಊರಿನಲ್ಲಿದ್ದಾರೆ, ಬರುತ್ತಾರೆಂದು ಸುಳ್ಳು ಹೇಳಿರುವ ಈ ಯುವತಿಯರಿಗೆ ಪ್ರತಿನಿತ್ಯ ಅನುಮಾನ ನರಕ ಯಾತನೆಯಾಯಿತು. ಇಷ್ಟೆಲ್ಲ ಸಮಸ್ಯೆಗಳಿಂದ ಬಳಲುತ್ತಿರುವ ಈ ಸಹೋದರಿಯರು ಈಗ ನನ್ನ ಮುಂದೆ ಕುಳಿತ್ತಿದ್ದರು. ನನ್ನ ಮುಂದಿರುವ ಪ್ರಶ್ನೆ. ಈ ಅಮಾಯಕ ಯುವತಿಯರು ಮಾಡಿರುವ ತಪ್ಪಾದರೂ ಏನು? ತಂದೆಯ ವರ್ತನೆ ಸರಿಯೆ? ಅಜ್ಜಿ ಅನಾಥಾಶ್ರಮಕ್ಕೆ ಸೇರಿಸಿದ್ದು ಉಚಿತವೆ? ಚಿಕ್ಕಮ್ಮನಿಗೆ ಮಾನವೀಯತೆ ಇದೆಯೆ? ಅನಾಥಾಶ್ರಮಗಳು, ವೃದ್ಧಾಶ್ರಮಗಳು ಅನಿವಾರ್ಯಗಳಾಗುತ್ತಿವೆಯೇ? ಮಹಿಳೆಯರಿಗೆ ಸ್ವತಂತ್ರವಾಗಿ ಬದುಕುವ ಅರ್ಹತೆಗಳಿಲ್ಲವೆ? ಇವರು ಅನುಭವಿಸುತ್ತಿರುವ ತೊಂದರೆಗೆ ಯಾರನ್ನು ದೂಷಿಸಬೇಕು? ನಿಜವಾಗಿ ಪರಿಹಾರ ಏನು? ಎಂಬೆಲ್ಲ ಪ್ರಶ್ನೆಗಳು ಒಮ್ಮೆಲೆ ನನ್ನ ಮುಂದೆ ಹಾದುಹೋದವು.

ಈ ಬಗೆಯ ಸನ್ನಿವೇಶಗಳ ಬಗ್ಗೆ ನಿಮಗೇನನ್ನಿಸುತ್ತದೆ ಎಂಬ ಪ್ರಶ್ನೆಗೆ ಅವರು ಉತ್ತರಿಸಿದ್ದು ಇಡೀ ವ್ಯವಸ್ಥೆಯ ಬಗ್ಗೆ ಆಕ್ರೋಶವಿದೆ. ಎಲ್ಲರಿದ್ದೂ ನಮ್ಮನ್ನು ಅನಾಥರನ್ನಾಗಿಸುವಲ್ಲಿ ಈ ಸಮಾಜ ಮುಖ್ಯ ಕಾರಣವಾಗಿದೆ ಎಂದರು. ಅನಾಥ ಪ್ರಜ್ಞೆಯಿಂದ ಉಂಟಾಗುವ ತೊಂದರೆಗೆ ಹೋಮಿಯೋಪತಿ ವೈದ್ಯಕೀಯ ಪದ್ಧತಿಯಲ್ಲಿ "ಮ್ಯಾಗ್ ಕಾರ್ಬ್" ಎಂಬ ಔಷಧಿ ಸೂಕ್ತವಾದುದು. ಹಾಗೆಯೇ ಕೋಪ, ತಿರಸ್ಕಾರ, ಸಿಟ್ಟಿನಿಂದಾದ ಪರಿಣಾಮಗಳಿಗೆ "ಸ್ಟೆಫಿಸ್ಯಾಗ್ರಿಯಾ" ಎಂಬ ಔಷಧಿ ಸೂಕ್ತ. ಅದನ್ನೇ ಪ್ರಯೋಗ ಮಾಡಿದೆ. ಅವರಲ್ಲಿ ಉಂಟಾದ ಚೈತನ್ಯ ಅವಿಸ್ಮರಣೀಯ. ಬದುಕು ವಿಚಿತ್ರ ಸೂತ್ರದಾರ ಎಂದೆನ್ನಿಸಿ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂನ "ರಾಮ ರಾವಣರೆಲ್ಲರೂ ವಿಧಿ ಆಟದ ಕೈಗೊಂಬೆಗಳಲ್ತೆ?" ಎಂಬ ಉಕ್ತಿ ಸ್ಮೃತಿಪಟಲವನ್ನು ಆವರಿಸಿತು.

ಈ ಸಹೋದರಿಯರ ಆತ್ಮಸ್ಥೈರ್ಯ, ಇಡೀ ವ್ಯವಸ್ಥೆ ಕ್ರೌರ್ಯದಿಂದ ನಡೆದುಕೊಂಡಾಗಲೂ ಛಲ ಬಿಡದ ತ್ರಿವಿಕ್ರಮನಂತೆ ಹೋರಾಡಿದ ಸ್ವಾಭಿಮಾನ, ಆತ್ಮಹತ್ಯೆಗೆ ಪ್ರಯತ್ನಿಸಿದರೂ ಅದು ಸರಿಯಲ್ಲ ಎಂಬ ಜೀವನಪ್ರೀತಿ, ಪುನಃ ಬದುಕನ್ನು ಕಟ್ಟಿಕೊಂಡ ಬಗೆ ನನ್ನನ್ನು ಚಕಿತಗೊಳಿಸಿದೆ. ಇದುವರೆಗೆ ಸಹೋದರಿಯರು ಅನುಭವಿಸಿದ ಸಂಕಟಕ್ಕೆ ಕಾರಣವಾದ ಘಟನೆಗಳನ್ನು ಯಾರಿಂದಲೂ ಬದಲಿಸಲು ಸಾಧ್ಯವಿಲ್ಲ. ಆದರೆ ಈ ಪ್ರಕರಣಗಳ ಹಿಂದಿರುವ ನಮ್ಮ ಧೋರಣೆ ಬದಲಾಗಬೇಕು. ತೆನಾಲಿ ರಾಮಕೃಷ್ಣನ ಬೆಕ್ಕು ಹಾಲು ಕುಡಿಯುವುದನ್ನು ಬಿಟ್ಟಿತ್ತು. ಅದು ಹಾಲಿನ ತಪ್ಪಲ್ಲ. ನಿರ್ಮಾಣ ಮಾಡಿದ್ದ ಪರಿಸ್ಥಿತಿಯ ತಪ್ಪು. ಹಾಗೆಂದು ಎಲ್ಲ ಗಂಡಸರೂ ಕೆಟ್ಟವರಲ್ಲ. ಅವರೆಲ್ಲರನ್ನೂ ಕ್ಷಮಿಸಿ ಜೀವನಪ್ರೀತಿಗೆ ಒಲಿದರೆ ಬಾಳು ಸುಗಮವಾಗುತ್ತದೆ ಎಂಬ ಆಪ್ತಮಾತು ಅವರಿಗೆ ಒಪ್ಪಿತವಾಗಿದ್ದವು. ಮನಸ್ಸನ್ನು ಮುಟ್ಟಿದ್ದವು. ಹೋಮಿಯೋಪತಿ ಚಿಕಿತ್ಸೆಯೂ ಒಳಗೊಂಡಂತೆ ಈಗಾಗಲೇ ಹಲವು ಬಗೆಯ ಔಷಧೋಪಚಾರಗಳಿಂದ ತರುಣಿಯರು ಬಳಲಿದ್ದರು, ದಿವ್ಯ ನಿರ್ಲಕ್ಷ್ಯದಿಂದಲೇ ಈ ಚಿಕಿತ್ಸೆಗೆ ಒಡ್ಡಿಕೊಂಡಿದ್ದರು. ಅವರ ದೈಹಿಕ ಮತ್ತು ಅಂತರಾಳದ ನೈಜ ಸಮಸ್ಯೆ ನನಗೆ ಅರ್ಥವಾಗಿದೆ ಎಂಬುದು ಅವರಿಗೆ ಅರ್ಥವಾಗಿದ್ದು ಅವರ ಸಂತೃಪ್ತಿಗೆ ಕಾರಣ.

ಈ ಸಹೋದರಿಯರು ಚಿಕಿತ್ಸೆ ಪಡೆಯಲು ಪ್ರಾರಂಭಿಸಿ ಹೋಗಿ ಮೂರು ತಿಂಗಳಾಗಿತ್ತು. ಚಿಕಿತ್ಸೆಯ ಪ್ರಾರಂಭದಲ್ಲಿ ಬಹಳಷ್ಟು ಏರುಪೇರುಗಳಿದ್ದವು. ಪ್ರತಿಸಲ ಬಂದಾಗಲೂ ಏನಾದರೊಂದು ಸಮಸ್ಯೆಯನ್ನು ತಂದಿರುತ್ತಿದ್ದರು. ಒಮ್ಮೆ ಬಂದಾಗ ಮುಖ ಹಾಗೂ ಕೈಗಳ ತುಂಬಾ ಗಾಯವಾಗಿದ್ದವು. ಅಷ್ಟರಮಟ್ಟಿಗೆ ಇಬ್ಬರೂ ಹೊಡೆದಾಡಿಕೊಂಡಿದ್ದರು "ಇನ್ನು ಆಗೋದಿಲ್ಲ ಸಾರ್, ನಾವು ಆತ್ಮಹತ್ಯೆ ಮಾಡಿಕೊಳ್ತೀವಿ" ಅಂದರು. ನನಗೆ ಆಶ್ಚರ್ಯವಾಯಿತು. ಇಷ್ಟೊಂದು ಜೀವನಪ್ರೀತಿ ಇದ್ದವರು ಇಂತಹ ನಿರ್ಧಾರಕ್ಕೆ ಬಂದದ್ದಾರೂ ಹೇಗೆ ಅನ್ನಿಸಿತು. "ನೋಡ್ರಮ್ಮ, ಈ ಪ್ರಪಂಚಕ್ಕೆ ನಾನು ನೀವು ಯಾರು ಇಲ್ಲದಿದ್ದರೂ ವ್ಯತ್ಯಾಸವೇನೂ ಆಗುವುದಿಲ್ಲ. ಇನ್ನೂ ಚೆನ್ನಾಗಿಯೇ ನಡೆದುಕೊಂಡು ಹೋಗುತ್ತದೆ. ಪ್ರಕೃತಿಗೆ ಇವೆಲ್ಲವನ್ನೂ ಅರಗಿಸಿಕೊಳ್ಳುವ ಶಕ್ತಿ ಇದೆ. ಆಕೆ ಬಂಜೆಯಲ್ಲ, ಒಂದು ಮಾತಿದೆ, ನಾನಿಲ್ಲದ ವಿಶ್ವ ಏನಾದರೇನು? ಕಾಲಿಲ್ಲದ ಅಶ್ವ ಗೂನಾದರೇನು?" ಎಂದೆ. ಈ ಮಾತು ಅವರಿಬ್ಬರ ಮನಸ್ಸಿಗೆ ನಾಟಿತು ಅನ್ನಿಸಿತು. ಆತ್ಮಹತ್ಯೆಯ ಬಗೆಗೆ ಪದೇಪದೇ ಮಾತನಾಡುವವರಿಗೆ ಹೋಮಿಯೋಪತಿ ಚಿಕಿತ್ಸೆಯಲ್ಲಿ ಕೊಡುವ 'ಆರಮ್ ಮೆಟ್' ಎಂಬ ಔಷಧವನ್ನು ಕೊಟ್ಟು ಕಳುಹಿಸಿದೆ. ಎರಡು–ಮೂರು ತಿಂಗಳಾದರೂ ಅವರು ಮತ್ತೆ ಕಾಣಿಸಲಿಲ್ಲ, ಔಷಧಿ ಸರಿಯಾಗಿ ಕೆಲಸಮಾಡಿಲ್ಲ ಅಂದುಕೊಳ್ಳುತ್ತಿದ್ದೆ.

ಒಂದು ದಿನ ಇದ್ದಕ್ಕಿದ್ದಂತೆ ಅವರನ್ನು ನೋಡಿದಾಗ ನನಗಾದ ಸಂತೋಷ ಮತ್ತು ಆಶ್ಚರ್ಯಕ್ಕೆ ಪಾರವೇ ಇಲ್ಲದಂತಾಯಿತು. ಅವರಿಬ್ಬರೂ ನವವಧುಗಳಂತೆ ಕಂಗೊಳಿಸುತ್ತಿದ್ದರು. ಮೊದಲಿನ ನಿಸ್ತೇಜತೆ, ಕಳಾಹೀನತೆ, ಅಸಹಾಯಕತೆ, ನಿರುತ್ಸಾಹ ಮಾಯವಾಗಿದ್ದವು. ಅವರ ಜೀವನೋತ್ಸಾಹ ಇಮ್ಮಡಿಯಾಗಿತ್ತು. ಅವರಿಬ್ಬರೂ ಮದುವೆ ಮಾಡಿಕೊಳ್ಳಲು ಸಿದ್ಧರಾಗಿದ್ದರು ವಿಶೇಷವೆಂದರೆ 'ಅವರಿಬ್ಬರನ್ನೂ ಒಬ್ಬನೇ ವ್ಯಕ್ತಿ ಮದುವೆಯಾಗುವುದಾದರೆ ಮಾತ್ರ! ಎಂಬ ಕರಾರಿನ ಮೇಲೆ. ಈ ಘಟನೆ ನನಗಂತೂ ಸಂತೃಪ್ತಿಯನ್ನೂ ಸಂತಸವನ್ನೂ ತಂದಿತ್ತು. 'ನೀನೊಲಿದರೆ ಕೊರಡು ಕೊನರುವುದಯ್ಯ' ಎಂಬ ಮಾತು ಸ್ಮೃತಿಪಟಲದಲ್ಲಿ ಅನುರಣಿಸಿತು. ಅವರೀರ್ವರ ಜೀವನ ಸುಖಕರವಾಗಿರಲಿ.